# ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

**ಸಿ. ಸಿ. ನಂ:1239/2020**

ಪಿಡಬ್ಲ್ಯು: 5
ಸಿಡಬ್ಲ್ಯು: 8

ಸಾಕ್ಷಿಯ ಹೆಸರು : ಐವನ್
ತಂದೆಯ ಹೆಸರು : ಪಟ್ಟು
ವಯಸ್ಸು : 28 ವರ್ಷ
ವೃತ್ತಿ : ಕೂಲಿಕೆಲಸ
ವಾಸಸ್ಥಳ : ಚಂಬೆಬೆಳ್ಳೂರು ಗ್ರಾಮ.

**ದಿನಾಂಕ: 23-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಶ್ರೀ. ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

1. ಚಾಸಾ: 7 ಮತ್ತು ಆರೋಪಿಯವರ ಪರಿಚಯ ಇರುತ್ತದೆ. ದಿ:15-09-2020 ರಂದು ಬಸ್ಸಿಗೆ ಕಾಯುತ್ತಿದ್ದಾಗ, ಅಲ್ಲಿ ಪೊಲೀಸರು ಬಂದು ಮೀನಾರವರ ಮನೆ ಎಲ್ಲಿ ಎಂದು ನನಗೆ ಕೇಳಿದರು, ಆಗ ನಾನು ಅವರ ಮನೆ ಗೊತ್ತು ಎಂದು ಅವರು ವಾಸವಿರುವ ಲೈನ್ ಮನೆಗೆ ಪೊಲೀಸರನ್ನು ಕರೆದುಕೊಂಡು ಹೋಗಿರುತ್ತೇನೆ. ಆರೋಪಿಯು ತಮ್ಮ ಮನೆಯ ಹಿಂದೆ ಸಿಲ್ವರ್ ಪಾತ್ರೆಯಲ್ಲಿ ಏನೋ ಬೇಯಿಸುತ್ತಿದ್ದರು. ನಂತರ ಅಲ್ಲೇ ಮನೆಯ ಹಿಂದೆ ಒಂದು ಗಿಡದ ಕೆಳಗಡೆ ಪ್ಲಾಸ್ಟಿಕ್ ಬಾಟಲಿನಲ್ಲಿ ನೀರಿನ ತರಹ ಕಾಣುವ ದ್ರವ ಇತ್ತು. ಸದರಿ ಬಾಟಲನ್ನು ತೆಗೆದು ನೋಡಿದಾಗ ಅದರಿಂದ ಭಟ್ಟಿ ಸಾರಾಯಿ ತರಹ ವಾಸನೆ ಬರುತ್ತಿತ್ತು. ಸ್ವಲ್ಪ ದೂರದಲ್ಲಿ ಇರುವ ಗಿಡದ ಕೆಳಗಡೆ ಬಿಂದಿಗೆಯಲ್ಲಿ ಸಾರಾಯಿ ತಯಾರು ಮಾಡಲು ಕಚ್ಚಾ ವಸ್ತು ಇತ್ತು. ಪೊಲೀಸರು ನನ್ನ ಮುಂದೆ ಮಹಜರು ಕ್ರಮ ಜರುಗಿಸಿ ಅರ್ಧ ಬಾಟಲಿನಷ್ಟು ಪದಾರ್ಥವನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದೆ. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ-3(ಇ) ಎಂದು ಗುರುತಿಸಲಾಯಿತು.

**ಮಾನ್ಯ ಸರಕಾರಿ ಅಭಿಯೋಜಕರು ಮುಂದುವರಿದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.**

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓ.ಹೇ.ಕೇ.ಸ.ಇ.

ಸಹಿ/-

**ಪ್ರದೀಪ ಪೋತದಾರ**
**ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ**
**ವಿರಾಜಪೇಟೆ**